ಹೊನ್ನಮ್ಮನಹಳ್ಳದಿಂದ ಚಿಕ್ಕಮಗಳೂರು ನಗರಕ್ಕೆ ನೀರು ಸರಬರಾಜು ಯೋಜನೆ ಬಗ್ಗೆ

೩೩೮. ಶ್ರೀ ಬಿ. ಬಿ. ಶಂಕರ್ (ಚಿಕ್ಕಮಗಳೂರು).— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊನ್ನಮ್ಮನಹಳ್ಳದಿಂದ ಚಿಕ್ಕಮಗಳೂರು ನಗರಕ್ಕೆ ನೀರು ಸರಬರಾಜು ಯೋಜನೆಯು ಆಡಿಗಲ್ಲನ್ನು ರಾಷ್ಟ್ರದ ಪ್ರಧಾನ ಮಂತ್ರಿಗಳೇ ಹಾಕಿದ್ದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಈ ಯೋಜನೆ ಯಾವ ಹಂತದಲ್ಲಿದೆ ಮತ್ತು ಇದಕ್ಕೆ ತಗಲುವ ವೆಚ್ಚವೆಷ್ಟು ?

ಇ) ಈ ಯೋಜನೆಯ ರೂಪರೇಷೆಗಳೇನು ಹಾಗೂ ಆರಂಭಿಸಲು ಆಗುತ್ತಿರುವ ವಿಳಂಬಕ್ಕೆ ಕಾರಣವೇನು ?

ಶ್ರೀ ಎಂ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—

ಅ) ಹೌದು.

ಆ) ಹೊನ್ನಮ್ಮನಹಳ್ಳದಿಂದ ಚಿಕ್ಕಮಗಳೂರು ನಗರಕ್ಕೆ ನೀರು ಸರಬರಾಜು ಮಾಡುವ ಯೋಜನೆಗೆ ೫೦ ಕೋಟಿ ರೂ.ಗಳು ವೆಚ್ಚವಾಗುವುದೆಂದು ಅಂದಾಜು ಮಾಡಲಾಗಿದ್ದು ಆರ್ಥಿಕವಾಗಿ ಭಾರಿ ದುಬಾರಿ ಯೋಜನೆಯೆಂದು ತೀರ್ಮಾನಿಸಲಾಗಿದೆ. ಆದ ಕಾರಣ ಈ ಯೋಜನೆಗೆ ಬದಲಾಗಿ ೬.೦೮ ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಯಗಚಿ ಜಲಾಶಯದಿಂದ ನೀರು ಸರಬರಾಜು ಮಾಡುವ ಯೋಜನೆಯೊಂದನ್ನು ತಯಾರಿಸಲಾಗಿದೆ.

ಇ) ಉದ್ಭವಿಸುವುದಿಲ್ಲ,

ಶ್ರೀ ಬಿ. ಬಿ. ಶಂಕರ್ — ಸನ್ಮಾನ್ಯ ಅಧ್ಯಕ್ಷರೇ, ಈ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ? ಎಷ್ಟನೆಯ ಇಸವಿಯಲ್ಲಿ ಪೂರ್ಣಗೊಳಿಸುತ್ತೀರಿ ? ನೀರಿನ ಸಮಸ್ಯೆಯನ್ನು ತಕ್ಷಣವೇ ಪರಿಹಾರ ಮಾಡಲಿಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಸೂಚನೆ ಏನಾದರೂ ಕೊಟ್ಟಿದ್ದೀರಾ ?

ಶ್ರೀ ಎ ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ೩೩೪ರ ನಿಯಮದ ಮೇರೆಗೆ ಇದೇ ಪ್ರಶ್ನೆಯನ್ನು ಕೇಳಿದಾಗ ಸವಿಸ್ತಾರವಾಗಿ ಹೇಳಿಕೆ ನೀಡಿದ್ದೇನೆ. ಈಗ ಎರಡು ಮಾರ್ಗಗಳಿಂದ ನೀರು ಸರಬರಾಜು ಇದೆ, ಒಂದು ಕೊಳವೆ ಬಾವಿಗಳ ಮೂಲಕ ಮತ್ತೊಂದು ಹಿರೇಕೊಳಲು ಕೆರೆಯಿಂದಲೂ ನೀರು ಸರಬರಾಜು ಇದೆ. ಯಗಚಿ ಜಲಾಶಯದಿಂದ ೩೦೦ ಟಿ.ಎಂ.ಸಿ.ಫಿಟ್. ನೀರು ಒದಗಿಸುವ ಯೋಜನೆಯೊಂದನ್ನು ತಯಾರಿಸಲಾಗಿದೆ, ಅಲ್ಲಿ ಈ ನೀರು ನಿರಾಪರಿಗೆ ಖಾತ್ರಿಗಾಗುತ್ತಿಲ್ಲ ಎನ್ನುವ ಅಂಶವೂ ಕೂಡ ಇದೆ. ಸದ್ಯಕ್ಕೆ ಕುಡಿಯುವ ನೀರಿನ ಬವಣೆ ಊರಿನಲ್ಲಿಲ್ಲ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಚಿಕ್ಕಮಗಳೂರಿನಲ್ಲಿ ೬೨,೦೦೦ ಜನ ಇದ್ದಾರೆ. ೯೫ ಕೊಳವೆ ಬಾವಿಗಳನ್ನು ಹಾಕಿಸಲಾಗಿದೆ. ೭೦೦ ಜನಕ್ಕೆ ಒಂದರಂತೆ ಕೊಳವೆ ಬಾವಿ ಇದೆ. ಯಾವ ಊರಿನಲ್ಲಿಯೂ ಇಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಕೊಳವೆ ಬಾವಿಗಳನ್ನು ಹಾಕಿಲ್ಲ. ಕುಡಿಯುವ ನೀರಿಗೆ ತೊಂದರೆ ಆದರೆ ನಾವು ನೀವು ಮುನಿಸಿಪಾಲಿಟಿಯವರು ಎಲ್ಲರೂ ಸೇರಿ ಪರಿಹಾರ ಮಾಡೋಣ. ಒಂದು ಹದ ಮಳೆ ಬಂದರೆ, ಹಿರೇಕೊಳಲು ತುಂಬುತ್ತೆ.

ಅಧ್ಯಕ್ಷರು.— ಪ್ರಶ್ನೆ ಸಂಖ್ಯೆ ೧೩೫ (೩೮೧) ಎನ್. ಎಂ. ಆಡ್ಯಾಂತಯ್ಯ, ಗೈರುಹಾಜರಿ.

ದಾವಣಗೆರೆಯಲ್ಲಿ ಅಡಿಷನಲ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ನ್ಯಾಯಾಲಯಗಳ ಸ್ಥಾಪನೆ

೩೯೦. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).— ಮಾನ್ಯ ನಗರಾಭಿವೃದ್ಧಿ ಹಾಗೂ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆನಗರದಲ್ಲಿ ಹೆಚ್ಚಿನ ಜಿಲ್ಲಾ ಮತ್ತು ಅಪರಾಧ ನ್ಯಾಯಾಲಯಗಳನ್ನು ಸ್ಥಾಪಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್(ನಗರಾಭಿವೃದ್ಧಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಇಲ್ಲ.

ಶ್ರೀ ಬಿ. ಜಿ. ಕೊಟ್ರಪ್ಪ.— ಸನ್ಮಾನ್ಯ ಅಧ್ಯಕ್ಷರೇ, ಧಾರವಾಡ–ಹುಬ್ಬಳ್ಳಿಯಲ್ಲಿ ಕೋರ್ಟ್ ಪ್ರಾರಂಭ ಮಾಡಿದಂತೆ ದಾವಣಗೆರೆಯಲ್ಲಿಯೂ ಕೂಡ, ಜನತೆಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಹೈಕೋರ್ಟಿಗೆ ನಿರ್ದೇಶನ ಮಾಡಿ ಅಡಿಷನಲ್ ಕೋರ್ಟ್ ಸ್ಥಾಪನೆ ಮಾಡುವುದಕ್ಕೆ ಮನಸ್ಸು ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.— ಸನ್ಮಾನ್ಯ ಅಧ್ಯಕ್ಷರೇ, ಅಡಿಷನಲ್ ಸೆಷನ್ಸ್ ಕೋರ್ಟ್ ಮತ್ತು ಡಿಸ್ಟ್ರಿಕ್ಟ್ ಕೋರ್ಟ್‌ಗಳನ್ನು ಸ್ಥಾಪನೆ ಮಾಡುವ ವಿಚಾರದಲ್ಲಿ ಅಗತ್ಯತೆಯ ಅಂಶವನ್ನು ಗಮನದಲ್ಲಿಟ್ಟು ಕೊಂಡು ತೀರ್ಮಾನ ತೆಗೆದುಕೊಳ್ಳುತಕ್ಕ ಅಧಿಕಾರ ಹೈಕೋರ್ಟಿಗೆ ಇದೆ. ಅವರು ತೀರ್ಮಾನ ತೆಗೆದು ಕೊಂಡ ಮೇಲೆ ಹಣಕಾಸನ್ನು ಒದಗಿಸಿಕೊಡತಕ್ಕಂಥಾದ್ದು ಸರ್ಕಾರದ ಜವಾಬ್ದಾರಿ. ಜನವರಿ ೧೦ನೇ ತಾರೀಖಿನ ಹೈಕೋರ್ಟಿನ ರಿಜಿಸ್ಟ್ರಾರ್‌ರವರಿಂದ ಸರ್ಕಾರಕ್ಕೆ ಈ ರೀತಿ ಪತ್ರ ಬಂದಿದೆ.

A letter has been received from the Registrar of High Court. It reads like this .—

"With reference to the above I am directed to inform that the High Court is not in favour of establishment of Additional District and Sessions Court at Davanagere"

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೇಮಕಾತಿ ಸಮಿತಿ

ಪ್ರಶ್ನೆ. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಸಿಬ್ಬಂದಿಗಳನ್ನು ನೇಮಿಸಲು ಸಂಸ್ಥೆಯ ನೇಮಕಾತಿ ಮಂಡಲಿ ಇದೆಯೇ ?

ಆ) ಈ ಸಿಬ್ಬಂದಿಗಳ ನೇಮಕಾತಿ ಯಾವ ನಿಯಮಗಳ ಅನುಸಾರ ನಡೆಯುತ್ತದೆ ?

ಇ) ಸಂಸ್ಥೆಯ ನೇಮಕಾತಿ ಮಂಡಳಿ ರಚನೆಯಾಗಿಲ್ಲವಾದಲ್ಲಿ ಎಂದು ಆಗಲಿದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಸಚಿವರು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ವರ್ಗ ಮತ್ತು ನೇಮಕಾತಿ ನಿಯಮಾವಳಿ, ೧೯೮೨ರ ಪ್ರಕಾರ ಸಮಿತಿಗಳಿವೆ.

ಆ) ನೇಮಕಾತಿಗಳು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ೧೯೮೨ರ (ವರ್ಗ ಮತ್ತು ನೇಮಕಾತಿ) ನಿಯಮಾವಳಿಗಳ ಅನುಸಾರ ನಡೆಯುತ್ತಿವೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ ಎಂ. ಇದಿನಬ್ಬ.— ಸನ್ಮಾನ್ಯ ಅಧ್ಯಕ್ಷರೇ, ೧೯೮೨ ರ ವರ್ಗ ಮತ್ತು ನೇಮಕಾತಿ ನಿಯಮಾವಳಿ ಪ್ರಕಾರ ಸರ್ವೀಸ್ ಆವರನ್ನು ಬಿಟ್ಟು ಎಲ್ಲಾ ವರ್ಗಗಳಲ್ಲಿಯೂ ನೇರವಾಗಿ ತೆಗೆದುಕೊಳ್ಳತಕ್ಕ ವ್ಯವಸ್ಥೆ ಉಂಟೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ಯಾರನ್ನೂ ಕೂಡ ಆ ರೀತಿ ತೆಗೆದುಕೊಳ್ಳುತ್ತಿಲ್ಲ.